ಶ್ರೀ ಸಿದ್ದರಾಮಯ್ಯ : ನೀವು ಪೂರಾ ಅವರ ಕಡೆಯವರೇ ಆಗಿಬಿಟ್ಟಿರಿ.

ಅಧ್ಯಕ್ಷರು : ಇಲ್ಲ, ಎರಡು ಕಡೆಯೂ ಬೇಕು ಎಂದೆ. ಚರ್ಚೆ ಬೇಡ, ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಅವರ ಪರ ಆಗಿಬಿಟ್ಟರೆ ಪ್ರಜಾಪ್ರಭುತ್ವ ಉಳಿಯುವುದಿಲ್ಲ, ಸರ್ಕಾರಕ್ಕೆ ಲಗಾಮು ಹಾಕುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಹಾಕೋಣ.

ಶ್ರೀ ಸಿದ್ದರಾಮಯ್ಯ : ಆದ್ದರಿಂದ, ದಯವಿಟ್ಟು ಈ ಚುನಾವಣೆಯನ್ನು ಮುಂದೂಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಕಾಲದಲ್ಲಿ ಇದೆಲ್ಲಾ ಹೊಸ ಇತಿಹಾಸ ನಿರ್ಮಾಣವಾಗುತ್ತದೆ, ಸತ್ಸಂಪ್ರದಾಯ ನಿರ್ಮಾಣವಾಗುತ್ತದೆ, ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತದೆ, ದಯವಿಟ್ಟು ಈ ಚುನಾವಣೆಯನ್ನು ಮುಂದೂಡ ಬೇಕೆಂಬುದು ನನ್ನ ಒತ್ತಾಯವಾಗಿದೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ದಯವಿಟ್ಟು ಮುಂದಿನ ಪ್ರಕ್ರಿಯೆ ನಡೆಸಬೇಕು.

4. ಅಧ್ಯಕ್ಷರ ತೀರ್ಪು:

ವಿಷಯ : ಉಪಾಧ್ಯಕ್ಷರ ಚುನಾವಣೆಯನ್ನು ಮುಂದೂಡುವ ಬಗ್ಗೆ.

ಅಧ್ಯಕ್ಷರು : ಈಗ ನಿಯಮ 8ರ ಪ್ರಕಾರ already ಇಲ್ಲಿ ಪ್ರಸ್ತಾವನೆ ಬಂದಿರುವುದರಿಂದ, ಯಾವುದೇ ಕಾರಣಕ್ಕೂ ಚುನಾವಣೆಯನ್ನು ಮುಂದೂಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮಾನ್ಯ ಗೋಪಾಲಕೃಷ್ಣರವರು, ಏನೋ ಒಂದು ನಿಮಿಷ ಮಾತನಾಡುತ್ತಾರೆ. ದಯವಿಟ್ಟು ಸುಮ್ಮನಿರಿ.

(ಗೊಂದಲ)

ಶ್ರೀ ಎನ್.ವೈ.ಗೋಪಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡಬೇಕಾದರೆ, 1985ರಿಂದ 1994 ಮತ್ತು

2004 ರವರೆಗೆ ಅಧ್ಯಕ್ಷರು & ಉಪಾಧ್ಯಕ್ಷರು ಆಗಿರುವವರ ಬಗ್ಗೆ ಅವರು ಹೇಳಿದರು. 1985–94 ರವರೆಗೆ ಏನು ನಡೆಯಿತೆಂಬ ಆ ಮಾಹಿತಿ ನಮಗಿಲ್ಲ. ಈಗ ನಡೆಯುತ್ತಿರುವುದು ಉಪಾಧ್ಯಕ್ಷರ ಚುನಾವಣೆ.

ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, ಆ ಮಾಹಿತಿಯನ್ನು ತೆಗೆದುಕೊಂಡು ಮಾತನಾಡಲಿ.

(ಗೊಂದಲ)

ಶ್ರೀ ಎನ್.ವೈ. ಗೋಪಾಲಕೃಷ್ಣ : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಿಮಗೆ ಒಂದು ಮಾತನ್ನು ಕೇಳಿದರು. ಸೌಜನ್ಯಕ್ಕಾದರೂ ಕೂಡ ವಿರೋಧಪಕ್ಷದ ನಾಯಕರನ್ನು ಕನ್ಸಲ್ಟ್ ಮಾಡಿ ಉಪಾಧ್ಯಕ್ಷರ ಚುನಾವಣೆ ನಡೆಸಿ ಎಂದು ಅವರು ಹೇಳಿರುವುದು. 2004ರಲ್ಲಿ ನಡೆದಂಥ ಚುನಾವಣೆಯಲ್ಲಿ ಮಾನ್ಯ ಧರ್ಮಸಿಂಗ್ ಅವರು ಮುಖ್ಯಮಂತ್ರಿಗಳಾಗಿದ್ದಂಥ ಒಂದು ಸಂದರ್ಭ. ಆಗ ಇಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಇಲ್ಲಿದ್ದರು, ಚುನಾವಣೆ ನಡೆಯುವ ಸಂದರ್ಭದಲ್ಲಿ ಹಿರಿಯರಾದ ಶ್ರೀ ಎಂ.ಪಿ. ಪ್ರಕಾಶ್‌ರವರಿದ್ದರು, ಯಡಿಯೂರಪ್ಪನವರು ಕೂಡ ಉಪಾಧ್ಯಕ್ಷರ ನೇಮಕಕ್ಕೆ ಅವತ್ತು ಸಹಕಾರ ಕೊಟ್ಟು ಚುನಾವಣೆ ನಡೆಸಿಕೊಂಡು ಹೋದರು. ಆದರೆ ಸೌಜನ್ಯಕ್ಕೆ ಕೇಳಿದ ಸಂದರ್ಭದಲ್ಲಿ ಆಗಬಹುದು ಎಂದು ಅವರು ಒಪ್ಪಿಗೆ ಕೊಟ್ಟು ನಂತರ, ಆ ಸಂದರ್ಭದಲ್ಲಿ ನಮ್ಮನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು, ಆ ಸಂದರ್ಭ ಈಗ ನಡೆದುಕೊಂಡು ಬರಲೆಂದು ಹೇಳುತ್ತಿರುವುದು. ನೀವು ಗೆಲ್ಲುತ್ತೀರಿ, ನಿಮಗೆ ಬಹುಮತವಿದೆ, ಅದರ ಬಗ್ಗೆ ನಮ್ಮ ಅಬ್ಜಕ್ಷನ್ ಇಲ್ಲ. ಆದರೆ ಸುರೇಶ್ ಕುಮಾರ್ ಅವರು ಕೆಲವು ಕಾರಣಗಳನ್ನು ಕೊಟ್ಟು ನೇರವಾಗಿ ಹಿಂದೆ ಮಾಡಿದರೆಂದು ಹೇಳಿದರು. ಕೃಷ್ಣರವರು ಜನತಾದಳದಿಂದ ಸ್ಪೀಕರ್ ಆದರು, ಗೋಪಾಲಕೃಷ್ಣರವರು ಕಾಂಗ್ರೆಸ್‌ನಿಂದ ಉಪಾಧ್ಯಕ್ಷರಾಗಿದ್ದರು, ಆ ಸಂಪ್ರದಾಯವನ್ನು ಈಗ ಪಾಲಿಸಬಹುದಾಗಿತ್ತಲ್ಲ. ಈಗ ಇರುವವರು ಬಿಜೆಪಿ ಸ್ಪೀಕರ್, ಮತ್ತೆ ಬಿಜೆಪಿಯವರು ಏಕೆ ಉಪಾಧ್ಯಕ್ಷರಾಗಬೇಕು ? ಹಿಂದಿನ ಸಂಪ್ರದಾಯವನ್ನು ನೀವು ಪಾಲಿಸಲಿಲ್ಲ.

ಅಧ್ಯಕ್ಷರು : ನಿಯಮ 8ರ ಪ್ರಕಾರ ಚುನಾವಣೆಯನ್ನು ಇಂದು ಮಾಡಲೇಬೇಕಾಗಿದೆ.